# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.50 ENGLISH DAILY Subscription Yearly - Rs. - SATURDAY 20-5-2023



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


### ಚೈನಾದ ಖರೀದಿ, ಮಲೇಶಿಯನ್ ಪಾಮೆಣ್ಣೆ ದರ ಹೆಚ್ಚಳ

ಚೈನಾದ ಪಾಮೆಣ್ಣೆ ಖರೀದೆ ಹೆಚ್ಚಳದಿಂದ ಮಲೇಶೀಯನ್ ಪಾಮೆಣ್ಣೆ ಫ್ಯೂಚರ್ ದರ 2.59 ಶೇಕಡಾ 88 ರಿಂಗಿಟ್ಸ್ ಹೆಚ್ಚಳಗೊಂಡು ಟನ್‌ಗೆ 3480 ರಿಂಗಿಟ್ಸ್ ( $ 784.67) ಆಗಿದೆ. ಈ ವಾರದಲ್ಲಿ ಒಟ್ಟು 4.6 ಶೇಕಡಾ ದರ ಇಳಿಕೆಯಾಗಿದೆ.

### ವರ್ಷದ ಪ್ರಥಮ 4 ತಿಂಗಳಲ್ಲೇ $ 1 ಬಿಲಿಯನ್ ಮೌಲ್ಯದ ಕಚ್ಚಾ ಗೋಡಂಬಿ ಖರೀದಿಸಿದ ವಿಯೆಟ್ನಾಂ

ವಿಯೆಟ್ನಾಂನ **ಪ್ರಕಾರ** ವಿಯೆಟ್ನಾಂ ಈ ವರ್ಷದ ಪ್ರಥಮ ನಾಲ್ಕು ತಿಂಗಳುಗಳಲ್ಲಿ 1 ಬಿಲಿಯನ್ ಡಾಲರ್ ಮೌಲ್ಯದ ಕಚ್ಚಾ ಗೋಡಂಬಿ ಖರೀದಿ ಮಾಡಿದ್ದು, ಹಿಂದಿನ ವರ್ಷಕ್ಕಿಂತ ಗಾತ್ರದಲ್ಲಿ 4.8 ಶೇಕಡಾ ಹೆಚ್ಚಳ ಹಾಗೂ ಮೌಲ್ಯದಲ್ಲಿ 7.1 ಶೇಕಡಾ ಕಡಿಮೆಯೆನ್ನಲಾಗಿದೆ. ಇದರಲ್ಲಿ 63.8 ಶೇಕಡಾ ಕಾಂಬೋಡಿಯಾದಿಂದ ಆಮದು ಮಾಡಲಾಗಿದ್ದು, ನಂತರ ಟಾಂಜಾನಿಯಾ, ಐವರಿಕೋಸ್ಟ್, ಘಾನಾಗಳಿವೆಯೆನ್ನಲಾಗಿದೆ. ಈ ಅವದಿಯಲ್ಲಿ ವಿಯೆಟ್ನಾಂ ಗೋಡಂಬಿ ತಿರುಳು ರಫ್ತಿನಿಂದ $ 952.5 ಮಿಲಿಯನ್ ಗಳಿಸಿದೆಯೆನ್ನಲಾಗಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿದ್ದುದರಿಂದ 4.5 ಶೇಕಡಾ ಹೆಚ್ಚಳವೆನ್ನಲಾಗಿದೆ. ಸರಾಸರಿ ದರ ಟನ್‌ಗೆ $ 5846 ಆಗಿದ್ದು, ಇದು ಹಿಂದಿನ ವರ್ಷದ ಈ ಅವಧಿಯಲ್ಲಿದ್ದುದರಿಂದ 1.8 ಶೇಕಡಾ ಇಳಿಕೆಯಾಗಿದೆಯೆನ್ನಲಾಗಿದೆ.

### ಬೇಸಿಗೆ ಬೆಳೆಯ ಬೇಳೆಕಾಳು, ಧಾನ್ಯಗಳ ಬಿತ್ತನೆ ಉತ್ತಮ

ಬೇಸಿಗೆ ಬೆಳೆಯ ಬಿತ್ತನೆ ಪ್ರದೇಶ ಒಟ್ಟು ಹಿಂದಿನ ವರ್ಷದ 71.90 ಲಕ್ಷ ಹೆಕ್ಟೇರ್‌ಗಳಿಂದ ಸ್ವಲ್ಪ ಮಟ್ಟಿನ ಇಳಿಕಯಾಗಿದ್ದು, 69.97 ಲಕ್ಷ ಹೆಕ್ಟೇರ್‌ಗಳಾಗಿವೆ. ಇದರಲ್ಲಿ ಬೇಳೆಕಾಳು ಹಿಂದಿನ ವರ್ಷದ 19.09 ರಿಂದ 19.81 ಲಕ್ಷ ಹೆಕ್ಟೇರ್ ಗಳಿಗೇರಿದೆ. ಧ್ಯಾನಗಳ ಬಿತ್ತನೆ ಹಿಂದಿನ ವರ್ಷದ 11.54 ಲಕ್ಷ ಹೆಕ್ಟೇರ್ ಗಳಿಂದ 11.93 ಲಕ್ಷ ಹೆಕ್ಟೇರ್ ಗಳಿಗೇರಿದೆ. ಆಹಾರ ಸಚಿವಾಲಯ 2023–24 ರಲ್ಲಿ 332 ಮಿಲಿಯನ್ ಟನ್ ಆಹಾರ ಧಾನ್ಯ ಉತ್ಪಾದನೆ (ಹಿಂದಿನ ವರ್ಷ 223 ಮಿಲಿಯನ್ ಟನ್) ಗುರಿ ಹೊಂದಿದೆ. ಇದರಲ್ಲಿ 292.5 ಲಕ್ಷ ಟನ್ ಬೇಳೆಕಾಳು ಉತ್ಪಾದನಾ ಗುರಿಯೆನ್ನಲಾಗಿದೆ. ( ಹಿಂದಿನ ವರ್ಷ 278.1 ಲಕ್ಷ ಟನ್‌ಗಳು) ಎಣ್ಣೆ ಬೀಜಗಳ ಉತ್ಪಾದನಾ ಗುರಿ ಹಿಂದಿನ ವರ್ಷದ 40 ಮಿಲಿಯನ್ ಟನ್‌ಗಳಿಂದ 44 ಮಿಲಿಯನ್ ಟನ್‌ಗಳಿಗೇರಿಸಲಾಗಿದೆಯೆನ್ನಲಾಗಿದೆ.